[ Govt. of Karnataka C.R.P. 67]

Deposition Sheets (RP.No.57) Form No.4

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 518/24**

ಪಿ.ಡಬ್ಲ್ಯು ಃ 1 ಸಿ.ಡಬ್ಲ್ಯು ಃ 1

ಸಾಕ್ಷಿದಾರನ ಹೆಸರು ಃ ಅಜಯ್

ತಂದೆಯ ಹೆಸರು ಃ ನಾಗಪ್ಪ

ಪ್ರಾಯ ಃ 27 ವರ್ಷ

ಉದ್ಯೋಗ ಃ ಖಾಸಗಿ

ವಾಸ ಃ ಹೆಬ್ರಿ ಕನ್ಯಾನ

ದಿನಾಂಕ 25.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿತರನ್ನು ದಿಃ31.12.2023 ರಂದು ಅಪಘಾತವಾದಾಗ ನೋಡಿರುತ್ತೇನೆ. ಚಾಸಾ-2 ಮತ್ತು 3 ರವರ ಪರಿಚಯ ಇರುತ್ತದೆ.

ದಿಃ31.12.2023 ರಂದು ರಾತ್ರಿ 8.50 ಗಂಟೆಗೆ ಕನ್ಯಾನದಿಂದ ಶಿವಪುರ ಕಡೆಗೆ ನಾನು ಚಾಸಾ-3 ಮತ್ತು ಮೃತ ಜಯಂತ್ ಬೋರೋರವರು ರಾಜ್ಯ ಹೆದ್ದಾರಿಯ ಎಡಭಾಗದ ಬದಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಹಿಂದುಗಡೆಯಿಂದ ಕೆಎ-20-ಎಂ ಎಫ್ - 1244 ಕಾರು ಅತೀವೇಗದಿಂದ ಬಂದು ಜಯಂತ್ ಬೋರೋರವರಿಗೆ ಢಿಕ್ಕಿಹೊಡೆಯಿತು. ಢಿಕ್ಕಿಹೊಡೆದ ಪರಿಣಾಮ ಜಯಂತ್ ಬೋರೋರವರು ಮುಂದೆ ಹೋಗಿ ಬಿದ್ದರು, ಬಿದ್ದ ಪರಿಣಾಮ ಅವರ ತಲೆಯ ಎಡಭಾಗಕ್ಕೆ ಪೆಟ್ಟಾಯಿತು. ತಕ್ಷಣ ನಾವು ಆತನನ್ನು ಹೆಬ್ರಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಸ್ಪತ್ರೆಯಲ್ಲಿ ವೈದ್ಯರು ಸ್ವಲ್ಪ ಸಮಯದ ನಂತರ ಬಂದು ಜಯಂತ್ ಬೋರೋರವರು ದಾರಿ ಮಧ್ಯೆಮಧ್ಯದಲ್ಲಿ ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು. ನಾನು ಅದೇ ದಿನ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರು ಮತ್ತು

ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಪೊಲೀಸರು ಮರುದಿನ ಸ್ಥಳಕ್ಕೆ ಬಂದು ಮಹಜರು ಮಾಡಿ ಚಾಸಾ-4 ಮತ್ತು 5 ರವರ ಸಮಕ್ಷಮ ಮಹಜರು ಮಾಡಿ ಅಪಘಾತಪಡಿಸಿದ ಕಿಯಾ ಕಾರನ್ನು ಸ್ವಾಧೀನಪಡಿಸಿಕೊಂಡರು. ಸದ್ರಿ ಮಹಜರನ್ನು ಪೊಲೀಸರು ಸಂಜೆ 4.30 ರಿಂದ 5.15 ರವರಗೆ ಮಾಡಿರುತ್ತಾರೆ. ಸಾಕ್ಷಿಯು ಸದ್ರಿ ಮಹಜರು ಮತ್ತು ನಕಾಶೆಯನ್ನು ಹಾಗೂ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ನಕಾಶೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರು ಸಮಯ ತೆಗೆದ ಅಪಘಾತ ಸ್ಥಳದ 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-4 ಎಂದು ಗುರುತಿಸಲಾಯಿತು. ಅಪಘಾತಪಡಿಸಿದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅಪಘಾತಪಡಿಸಿದ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರು ಸಮಯವಕಾಶ ಕೋರಿದ್ದು ರೂ.500/- ಖರ್ಚಿನೊಂದಿಗೆ ಸಮಯವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ